# ರಜನಿ ಮತ್ತು ದೇವರು

ರಜನಿಕಾಂತ್ ನಿಜಕ್ಕೂ ರಾಜಕೀಯ ಪ್ರವೇಶ ಮಾಡುತ್ತಾರೆಯೆ? –'ಕಟ್ಟಪ್ಪ ಬಾಹುಬಲಿಯನ್ನು ಏಕೆ ಕೊಂದ?' ಎಂಬ ಪ್ರಶ್ನೆಯ ಬಳಿಕ ಭಾರತದಲ್ಲಿ ಅತ್ಯಂತ ಹೆಚ್ಚು ಜನರು ಕೇಳುತ್ತಿರುವ ಪ್ರಶ್ನೆ ಇದೇ ಇರಬೇಕು! ಈಗ ಇನ್ನೊಂದು ಸುತ್ತಿನ ಚರ್ಚೆ ಆರಂಭವಾಗಿದೆ. ಅರ್ಧ ಜನ 'ಈ ಸಲ ಖಂಡಿತಾ ಪ್ರವೇಶಿಸುತ್ತಾರೆ' ಎಂದರೆ, ಇನ್ನರ್ಧ ಜನ, 'ಇಲ್ಲಪ್ಪ, ಪ್ರವೇಶಿಸುವುದಿಲ್ಲ. ನಟನೆಯೇ ಬೇರೆ, ರಾಜಕೀಯವೇ ಬೇರೆ' ಎನ್ನುತ್ತಿದ್ದಾರೆ. ಈ ಮಧ್ಯೆ ಲಕ್ಷಾಂತರ ಅಭಿಮಾನಿಗಳು ರಜನಿಯ ರಾಜಕೀಯ ಪ್ರವೇಶವನ್ನು ಕಾದು ಕುಳಿತಿದ್ದರೆ, ಇನ್ನೊಂದಿಷ್ಟು ಲಕ್ಷ ಅಭಿಮಾನಿಗಳು 'ತಲೈವರ್, ರಾಜಕೀಯ ಬೇಡವೇ ಬೇಡ' ಎನ್ನುತ್ತಿದ್ದಾರೆ. ಪ್ರತಿವರ್ಷವೂ ಭುಗಿಲೇಳುವ ರಜನಿಯ ರಾಜಕೀಯ ಪ್ರವೇಶದ 'ಮಿಲಿಯನ್ ಡಾಲರ್ ಪ್ರಶ್ನೆ' ಈಗ ಮತ್ತೆ ಭುಗಿಲೆದ್ದಿದೆ.

ರಜನಿಗೂ ದೇವರಿಗೂ ನಡುವೆ ಎಲ್ಲಿಲ್ಲದ ಪ್ರೀತಿ. ಸಂದಿಗ್ಧ ಪ್ರಶ್ನೆಗಳು ಬಂದಾಗಲೆಲ್ಲ ರಜನಿಕಾಂತ್ ದೇವರನ್ನು ಮಧ್ಯೆ ಎಳೆದು ತರುತ್ತಾರೆ. 1996ರಲ್ಲಿ ತಮಿಳುನಾಡಿನ ಚುನಾವಣೆಗೆ ರಂಗ ಸಿದ್ಧವಾಗಿತ್ತು. ಜಯಲಲಿತಾ ಅವರ ಆಡಳಿತಾರೂಢ ಅಣ್ಣಾಡಿಎಂಕೆ ಮತ್ತೆ ಚುನಾವಣೆಯಲ್ಲಿ ಗೆಲ್ಲಲು ಹೊರಟಿತ್ತು. 'ಮತ್ತೆ ಅಣ್ಣಾಡಿಎಂಕೆ ಸರಕಾರ ಅಧಿಕಾರಕ್ಕೆ ಬಂದರೆ ತಮಿಳುನಾಡನ್ನು ದೇವರೇ ಕಾಪಾಡಬೇಕು' ಎಂದು ರಜನಿಕಾಂತ್ ಹೇಳಿಕೆ ಕೊಟ್ಟರು. ರಜನಿ ಹೇಳಿಕೆಗೆ ಭಾರೀ ಜನಬೆಂಬಲ! ಚುನಾವಣೆಯಲ್ಲಿ ಜಯಲಲಿತಾ ಪಕ್ಷ ಸೋತು ಡಿಎಂಕೆ ಅಧಿಕಾರಕ್ಕೆ ಬಂತು.

ರಜನಿಕಾಂತ್ ರಾಜಕೀಯಕ್ಕೆ ಸೇರಬೇಕು ಅಥವಾ ಹೊಸ ಪಕ್ಷವೊಂದನ್ನು ಸ್ಥಾಪಿಸಬೇಕು ಎಂದು ಹಿಂದೆಯೂ ಅಭಿಮಾನಿಗಳು ಒತ್ತಡ ಹೇರಿದ್ದುಂಟು. ಎರಡು ಬಾರಿ ಅಭಿಮಾನಿಗಳು ರಜನಿ ಹೆಸರಲ್ಲಿ ಪಕ್ಷಗಳನ್ನೂ ಘೋಷಣೆ ಮಾಡಿದ್ದರು. ಆಗೆಲ್ಲ ರಜನಿ ಹೇಳಿದ್ದು– ದೇವರು ನಾನು ಆ್ಯಕ್ಟರ್ ಆಗಬೇಕು ಎಂದು ವಿಧಿಸಿದ್ದಾನೆ. ನೋ ಪಾಲಿಟಿಕ್ಸ್! ಕಳೆದ ವಾರ ಮತ್ತೆ



ರಜನಿ ತಮ್ಮ ಭಾಷಣದ ಮಧ್ಯೆ ದೇವರನ್ನು ಎಳೆದು ತಂದಿದ್ದಾರೆ. ಎಂಟು ವರ್ಷಗಳ ಬಳಿಕ ರಜನಿಕಾಂತ್ ಅಭಿಮಾನಿಗಳ ಸಭೆ ನಡೆಸಿದ್ದಾರೆ. ವಾರ ಕಾಲ ನಡೆದ ಸಭೆಯ ಕೊನೆಯಲ್ಲಿ 'ಈಗ ದೇವರು ಬಯಸಿದರೆ ನಾನು ನಾಳೆಯೇ ರಾಜಕೀಯಕ್ಕೆ ಸೇರಬಹುದು' ಎಂದಿದ್ದಾರೆ.

ರಜನಿ ರಾಜಕೀಯಕ್ಕೆ ಸೇರುವುದೇ ಆದರೆ, ಇರುವ ಯಾವುದಾದರೂ ಪಕ್ಷ ಸೇರುತ್ತಾರೆಯೆ ಅಥವಾ ತಮ್ಮದೇ ಹೊಸ ಪಕ್ಷ ಸ್ಥಾಪಿಸುತ್ತಾರೆಯೆ? ಅಥವಾ ಹೊಸ ಪಕ್ಷಕ್ಕೆ ಇರುವ ಯಾವುದಾದರೂ ಪಕ್ಷದ ಬೆಂಬಲ ಪಡೆಯುತ್ತಾರೆಯೆ? ಏನೇ ಆದರೂ ತಮಿಳುನಾಡಿನ ರಾಜಕೀಯ ಅಲ್ಲೋಲ ಕಲ್ಲೋಲ ಆಗುವುದರಲ್ಲಿ ಸಂಶಯವಿಲ್ಲ. ಮೊನ್ನೆ ಅಭಿಮಾನಿಗಳ ಸಮಾವೇಶದಲ್ಲಿ ರಜನಿ ಇಬ್ಬರು ರಾಜಕಾರಣಿಗಳ ಹೆಸರು ಹೇಳಿದ್ದಾರೆ. 'ತಮಿಳುನಾಡಿನಲ್ಲಿ ಸ್ಟಾಲಿನ್ ಮತ್ತು ಅನ್ಬುಮಣಿ ರಾಮದಾಸ್‌ರಂತಹ ಒಳ್ಳೆಯ ರಾಜಕೀಯ ನಾಯಕರಿದ್ದಾರೆ' ಎಂದಿದ್ದಾರೆ! ಅಂದರೆ ಅವರ ಪಕ್ಷದ ಬೆಂಬಲ ಪಡೆಯಬಹುದೆ? ರಜನಿ ಡಿಎಂಕೆ ಯನ್ನು ಬೆಂಬಲಿಸಬಹುದೆ? ಡಿಎಂಕೆ ನಾಯಕ ಸ್ಟಾಲಿನ್ ಈಗಾಗಲೆ ರಜನಿ ಹೇಳಿಕೆಯನ್ನು ಸ್ವಾಗತಿಸಿದ್ದು 'ಆದರೆ ಅವರು ರಾಜಕೀಯಕ್ಕೆ ಸೇರುವುದು ಅವರ ಇಷ್ಟಕ್ಕೆ ಬಿಟ್ಟ ವಿಷಯ, ನಾನೇನೂ ಹೇಳಲಾರೆ' ಎಂದಿದ್ದಾರೆ.

ರಜನಿ ರಾಜಕೀಯಕ್ಕೆ ಬರುವುದನ್ನು ಬಿಜೆಪಿ ಮತ್ತು ಆರೆಸ್ಸೆಸ್ ನಾಯಕರು ಈಗಾಗಲೆ ಬೆಂಬಲಿಸಿದ್ದಾರೆ. 2014ರಲ್ಲಿ ಚೆನ್ನೈಗೆ ಆಗಮಿಸಿದ್ದ ಪ್ರಧಾನಿ ನರೇಂದ್ರ ಮೋದಿ, ರಜನಿಕಾಂತ್ ನಿವಾಸಕ್ಕೆ ಭೇಟಿ ನೀಡಿದ್ದರು. ಅವರಿಬ್ಬರೂ 'ಇದೊಂದು ಸೌಹಾರ್ದ ಭೇಟಿ ಅಷ್ಟೆ' ಎಂದಿದ್ದರು. ಅಂದರೆ ರಜನಿಕಾಂತ್ ಈಗ ಬಿಜೆಪಿ ಬೆಂಬಲ ಪಡೆಯಬಹುದೆ? ಬಿಜೆಪಿಯಲ್ಲಿರುವ ಡಾ.ಸುಬ್ರಹ್ಮಣ್ಯಸ್ವಾಮಿ ಪ್ರಕಾರ, ರಜನಿ ರಾಜಕೀಯಕ್ಕೆ ಸೇರಿದರೆ ಅದೊಂದು ದುರಂತ! 'ದೇವರ ಬಗ್ಗೆ ರಜನಿ ಹೇಳಿಕೆ ಒಂದು ಜೋಕ್' ಎಂದಿದ್ದಾರೆ ಸ್ವಾಮಿ. ಒಟ್ಟಾರೆ ರಜನಿ ರಾಜಕೀಯಕ್ಕೆ ಸೇರುವುದೇ ಆದರೆ ಅಣ್ಣಾಡಿಎಂಕೆ ಒಂದನ್ನು ಬಿಟ್ಟು ಬೇರೆ ಎಲ್ಲ ಆಯ್ಕೆಗಳೂ ಮುಕ್ತವಾಗಿವೆ.

ರಾಜಕೀಯ ವೀಕ್ಷಕರ ಪ್ರಕಾರ, ಈಗ 66ರ ಇಳಿವಯಸ್ಸಿನಲ್ಲಿ ರಜನಿಕಾಂತ್ ರಾಜಕೀಯ ಸೇರಿ ಗೆಲ್ಲುವುದು ಕಷ್ಟ. '1996ರಲ್ಲೇ ರಜನಿ ಹೊಸ ರಾಜಕೀಯ ಪಕ್ಷ ಕಟ್ಟಬೇಕಿತ್ತು. ಆಗ ಅವರು ಚುನಾವಣೆಯಲ್ಲಿ ಎಲ್ಲರನ್ನೂ ಗುಡಿಸಿ ಹಾಕಿ ಅಧಿಕಾರಕ್ಕೆ ಬರುತ್ತಿದ್ದರು' ಎನ್ನುತ್ತಾರೆ ವೀಕ್ಷಕರು. ಅದನ್ನು ಆಗ ಹಿರಿಯ ಪತ್ರಕರ್ತ ಚೋ ರಾಮಸ್ವಾಮಿ ಕೂಡಾ ಹೇಳಿದ್ದರು. ಆಗ ರಜನಿ ಯುವಕರಾಗಿದ್ದರು, ಆರೋಗ್ಯವೂ ಚೆನ್ನಾಗಿತ್ತು. ಈಗ ರಾಜಕೀಯ ಅಷ್ಟು ಸುಲಭವಲ್ಲ. ಅದರಲ್ಲೂ ತಮಿಳುನಾಡಿನ ರಾಜಕೀಯ ಭ್ರಷ್ಟಾಚಾರ ಮತ್ತು ವ್ಯಕ್ತಿಪೂಜೆಯಿಂದ ಕಲುಷಿತಗೊಂಡು ರಾಡಿಯೆದ್ದಿದೆ. 'ತಮಿಳುನಾಡಿನ ಯುವಜನತೆ ಒಬ್ಬ ಬಲಿಷ್ಠ ರಾಜಕಾರಣಿಯನ್ನು ಬಯಸುತ್ತಿದ್ದಾರೆ. ರಾಜಕೀಯದಲ್ಲಿ ವ್ಯಕ್ತಿ ಆರಾಧನೆಯ ಬಗ್ಗೆ ಅವರಲ್ಲಿ ಒಲವು ಕಡಿಮೆಯಾಗುತ್ತಿದೆ' ಎನ್ನುವುದು ವೀಕ್ಷಕರ ಸ್ಪಷ್ಟನುಡಿ.

ಸುಬ್ರಹ್ಮಣ್ಯನ್‌ಸ್ವಾಮಿ 'ರಜನಿ ತಮಿಳಿಗನೇ ಅಲ್ಲ. ಮರಾಠಿ ಕನ್ನಡಿಗ' ಎಂದು ಕಾಲೆಳೆದಿದ್ದಾರೆ. ಅದಕ್ಕೆ ರಜನಿ 'ನಾನು ಕರ್ನಾಟಕದಲ್ಲಿ ಇದ್ದುದು 24 ವರ್ಷ. ಆದರೆ ತಮಿಳ್ನಾಡಿನಲ್ಲಿ 40 ವರ್ಷಗಳಿಂದ ಇದ್ದೇನೆ. ನಾನು ಅಚ್ಚ ತಮಿಳಿಗ. ನನ್ನನ್ನು ತಮಿಳನನ್ನಾಗಿ ಮಾಡಿದ್ದು ನೀವೇ' ಎಂದು ಅಭಿಮಾನಿಗಳಿಗೆ ಕೈ ಎತ್ತಿ ಮುಗಿದಿದ್ದಾರೆ. 'ಹಿಂದೆಲ್ಲ ಯುದ್ಧ ನಡೆದರೆ ಎಲ್ಲ ಜನರೂ ಅದರಲ್ಲಿ ಭಾಗವಹಿಸುತ್ತಿದ್ದರು. ಸಮರ ಘೋಷಣೆಯಾದಾಗ ನಿಮ್ಮನ್ನೆಲ್ಲ ಕರೆಯುತ್ತೇನೆ. ಆಗ ಬನ್ನಿ' ಅಂದಿದ್ದಾರೆ ರಜನಿ.

ಇಷ್ಟೆಲ್ಲ ಆದ ಬಳಿಕವೂ ಅದೇ ಪ್ರಶ್ನೆ ಉಳಿಯುತ್ತದೆ. ರಜನಿ ರಾಜಕೀಯಕ್ಕೆ ಬರುತ್ತಾರೆಯೆ? ದೇವರೇ ಉತ್ತರಿಸಬೇಕು! ■

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65